ಮಾಡುವುದಕ್ಕೆ ಕೂಡ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಅದೇ ರೀತಿ ಕೋಲಾರ ಮತ್ತು ಮುಳಬಾಗಿಲುಗಳಲ್ಲಿ ಇತ್ತೀಚೆಗೆ ನಡೆದ ಕೋಮುಗಲಭೆಗಳು ಮತ್ತೊಂದು ಕಾರಣದಿಂದ ಅಲ್ಲಿ ಕೆಲಸಕ್ಕೆ ಜನರು ಹೋಗುವ ಹಾಗಿರಲಿ ಇದೆಲ್ಲ ತಮಗೆ ಗೊತ್ತಿದೆ. ಈ ಎಲ್ಲ ಕಾರಣಗಳು ಇರುವುದರಿಂದ ಸ್ವಲ್ಪ ತಡವಾಗಿದೆ ದಿನವ ನಾವು ಡಿಪಾರ್ಟ್‌ಮೆಂಟ್‌ವೈಸ್ ರೆಡಿ ಇದ್ದೇವೆ. ಕೋರ್ಟ್‌ನಿಂದ ಬಂದಿರುವ ತಡೆಯಾಜ್ಞೆ ವೆಕೇಟ್ ಆಗಬೇಕು. ನಾವು ಹಣ ರೆಡಿ ಇಟ್ಟುಕೊಂಡಿದ್ದೇವೆ. ಈಗಾಗಲೇ 133 ಟವರ್‌ಗಳನ್ನು ಮುಗಿಸಿದ್ದೇವೆ. ಇನ್ನು 6 ಮಾತ್ರ ಬಾಕಿ ಉಳಿದಿದ್ದು ತತ್‌ಕ್ಷಣ ಮುಗಿಸುವುದಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಆದಷ್ಟು ಬೇಗ ಕೆಲಸ ಮಾಡಿ ಮುಗಿಸುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ: ಮಾನ್ಯ ಮುಖ್ಯಮಂತ್ರಿಗಳನ್ನು ನೋಡಿದಾಗ, ಅವರೆ ಪಾಪ ಮುತುವರ್ಜಿ ವಹಿಸಿ ಕೆ.ಇ.ಬಿ. ಅಧ್ಯಕ್ಷರಿಗೆ ಹೇಳಿ ಮಾಡಿಸಿದ್ದಾರೆ. ದಯವಿಟ್ಟು ಈ ತಿಂಗಳ ಕೊನೆಯೊಳಗೆ ಮುಗಿಸುತ್ತೀರಾ?

ಶ್ರೀ ಎಸ್. ಬಂಗಾರಪ್ಪ: ನಮ್ಮ ಉದ್ದೇಶವೂ ಇದೇ ಆಗಿದೆ. ಆದಷ್ಟು ಶೀಘ್ರವಾಗಿ ಮುಗಿಸುವುದಕ್ಕೆ, ನಾನೇನೋ ಮಾರ್ಚ್ ತಿಂಗಳು ಎಂದು ಬಿಡಬಹುದು. ಆದರೆ ತಡೆಯಾಜ್ಞೆ ವೆಕೇಟ್ ಆಗದಿದ್ದರೆ ಏನು ಮಾಡಬೇಕು? ಕೋರ್ಟು ನಮ್ಮ ಕೈಯಲ್ಲಿ ಬರುವುದಿಲ್ಲವಲ್ಲ ಎಂಬ ಯೋಚನೆ ಇದೆ. ಆದಷ್ಟು ಶೀಘ್ರವಾಗಿ ಇದನ್ನು ಮಾಡಿ ಮುಗಿಸುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಂ.ವಿ. ವೆಂಕಟಪ್ಪ: ಕೋರ್ಟ್ ಸ್ಟೇ ವೆಕೇಟ್ ಆಗಿದೆ.

SRI S. BANGARAPPA: Now I have got the latest information here. ನಾವು ಕೂಡ ಇದರಲ್ಲಿ ಅಷ್ಟೇ ಸೀರಿಯಸ್ ಆಗಿದ್ದೇವೆ. By about 31st March, Mulabagilu Sub-station will be ready.

ಅಧ್ಯಕ್ಷರು: ಪುನಃ ನೀವು ಇದರ ಬಗ್ಗೆ ಪ್ರಶ್ನೆ ಹಾಕಬೇಡಿ.

ಶ್ರೀ ಎಂ.ವಿ. ವೆಂಕಟಪ್ಪ: ಇಲ್ಲ ಸ್ವಾಮಿ ಈಗಾಗಲೇ ನಾನು ಐದು ಸಲ ಪ್ರಶ್ನೆ ಹಾಕಿದ್ದೇನೆ.

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆ

654 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದರೆ, ಅದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಗ್ರಾಮಾಂತರ ಪ್ರದೇಶಗಳಲ್ಲಿ ವೋಲ್ಟೇಜ್ ಸಾಲದೆ ರೈತರ ಪಂಪುಸೆಟ್ಟುಗಳು ನೀರು ಎಳೆಯದೆ ತೊಂದರೆಯಾಗಿರುವುದು ಹಾಗೂ ವಿದ್ಯಾರ್ಥಿಗಳು ಸಹ ಸೀಮೆ ಎಣ್ಣೆ ದೀಪದ ಸಹಾಯದಿಂದ ಓದುವ ಸ್ಥಿತಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಅದನ್ನು ಸುಧಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು, ಗಮನಕ್ಕೆ ಬಂದಿದೆ.

ಅ) ಸದ್ಯದ ಪರಿಸ್ಥಿತಿಯಲ್ಲಿ, ಈ ರೀತಿಯ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸುವುದು ಅನಿವಾರ್ಯ.

ಇ) ಹೌದು. ಗಮನಕ್ಕೆ ಬಂದಿದೆ.

ಈ) ವೋಲ್ಟೇಜ್ ಗುಣಮಟ್ಟವನ್ನು ಸುಧಾರಿಸುವ ಸಲುವಾಗಿ ಪ್ರತಿ ವರ್ಷವೂ ಹಲವು ಹೊಸ ವಿದ್ಯುತ್ ಪ್ರಸರಣಾ ಮಾರ್ಗಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಮತ್ತು ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ. ಹೊಸ ಪ್ರಸರಣಾ ಮಾರ್ಗಗಳಿಗೆ ಮತ್ತು ಹೊಸ ಉಪ ವಿದ್ಯುತ್ ಕೇಂದ್ರಗಳನ್ನು ನಿರ್ಮಾಣ ಮಾಡಲು ಬೇಕಾಗುವ ಹಣದ ಮೊತ್ತ ಅಗಾಧವಾಗಿರುವುದರಿಂದ ಅವಶ್ಯಕತೆ ಮತ್ತು ಅವ್ಯತೆಗಳನ್ನು ಗಮನಿಸಿ, ಹಂತ ಹಂತವಾಗಿ, ನಿರ್ಮಾಣ ಕಾರ್ಯವನ್ನು ಮಾಡಬೇಕಾಗುತ್ತದೆ. ಅಲ್ಲದೆ, ವಿತರಣಾ ವ್ಯವಸ್ಥೆಯಲ್ಲಿಯೂ ಸಹ ಕೆಪಾಸಿಟರ್ ಬ್ಯಾಂಕುಗಳನ್ನು ಅಳವಡಿಸುವುದು, ಹೊಸ ಎಕ್ಸ್‌ಪ್ರೆಸ್ ಫೀಡರ್‌ಗಳನ್ನು ಹಾಕುವುದು, ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದು ಮತ್ತು ಹೊಸ ಸ್ವೀಕರಣಾ ಕೇಂದ್ರಗಳ ಸ್ಥಾಪನೆ ಮುಂತಾದ ವ್ಯವಸ್ಥೆ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡು ವೋಲ್ಟೇಜ್ ಮಟ್ಟವನ್ನು ಸುಧಾರಿಸಲಾಗುತ್ತಿದೆ.

ಶ್ರೀ ಎ.ಟಿ. ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಗಂಟೆ ಲೋಡ್‌ಶೆಡ್ಡಿಂಗ್ ಮಾಡುತ್ತಿದ್ದಾರೆ? ಲೋಡ್‌ಶೆಡ್ಡಿಂಗ್ ವೇಳೆಯಲ್ಲವೆ ಬೇರೆ ವೇಳೆಯಲ್ಲೂ ಪದೇ ಪದೇ ಒಂದು ಗಂಟೆಗೆ ಎರಡು ಸಾರಿ, ಮೂರು ಸಾರಿ ವಿದ್ಯುತ್ ನಿಲುಗಡೆ ಆಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳ ರೈತಾಪಿ ವರ್ಗದ ಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ತಪ್ಪಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ? ವಿಶೇಷವಾಗಿ ಸಾಯಂಕಾಲ ಆರೂವರೆ-ಏಳು ಗಂಟೆಯಿಂದ ಒಂಭತ್ತೂವರೆ-ಹತ್ತು ಗಂಟೆಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕರೆಂಟ್ ಇರುವುದಿಲ್ಲ ತಮಗೆ ಗೊತ್ತಿದೆ, ಸೀಮೆಎಣ್ಣೆ ಪೂರೈಕೆ ಸಾಕಷ್ಟು ಆಗುತ್ತಿಲ್ಲ ಎಂದು ಸರ್ಕಾರ ಈಗಾಗಲೇ ಹೇಳಿದೆ. ಒಂದು ಕಡೆ ಸೀಮೆಎಣ್ಣೆ ಪೂರೈಕೆ ಸಮರ್ಪಕವಾಗಿ ಸಿಗುತ್ತಿಲ್ಲ, ಮತ್ತೊಂದು ಕಡೆ ಕರೆಂಟ್ ಇರುವುದಿಲ್ಲ, ಯಾವಾಗ ಬೆಳಕಿನ ಅವಶ್ಯಕತೆ ಇರುತ್ತದೆ ಆಗ ಬೆಳಕನ್ನು ಕೊಡಲಿಕ್ಕೆ ಸರ್ಕಾರಕ್ಕೆ ಸಾಧ್ಯ ಆಗಲಿಲ್ಲವೆಂದರೆ ಇದರ ನಿವಾರಣೆಗೆ ಸರ್ಕಾರ ಏನು ಕಾರ್ಯಕ್ರಮ ಕೈಗೊಳ್ಳುತ್ತದೆ ಎನ್ನುವುದನ್ನು ದಯಮಾಡಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ಬೇರೆ ಸದಸ್ಯರ ಪ್ರಶ್ನೆಗೆ ಏನು ಉತ್ತರ ಕೊಟ್ಟಿದ್ದೇನೆ, ಅದನ್ನೇ ಮುಂದುವರಿಸಿ ಉತ್ತರ ಕೊಡಬೇಕಾದ ಅವಶ್ಯಕತೆ ಇದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ನಿಜವಾಗಿಯೂ ವೋಲ್ಟೇಜ್ ಡ್ರಾಪ್ ಆಗುವುದು, ಮತ್ತೊಂದು ಆಗುವುದು, ಇದಕ್ಕೆ ಹಲವಾರು ಕಾರಣಗಳು ಇವೆ. ಇದು ತಮಗೆಲ್ಲರಿಗೂ ಗೊತ್ತಿದೆ. ಉದಾಹರಣೆಗೆ ವಾರ್ಷಿಕ ಗುರಿ, ಹೊಸದಾಗಿ ಎನರ್‌ಜೈಜ್ ಮಾಡತಕ್ಕಂಥಾದ್ದು 40 ಸಾವಿನ ಇತ್ತು. ಇದನ್ನು ತಮ್ಮ ಗಮನಕ್ಕೂ ಸದನದಲ್ಲಿ ತಂದಿದ್ದೇನೆ. We raised that to 60,000 new pumpsets to be energised.ಎಂದು ಮಾಡಿದ್ದೇವೆ. ಅದರ ಮೇಲೆ ಲೋಡ್ ಬೀಳುತ್ತದೆ. ಅಂದರೆ ಈಗಿರತಕ್ಕಂಥ ಸಿಸ್ಟಂ ಮೇಲೆ ಲೋಡ್ ಬೀಳುತ್ತದೆ. ಇದು ಕೂಡ ಮುಖ್ಯ ಕಾರಣ. 60 ಸಾವಿರಕ್ಕೆ ಏರಿಸುವುದಕ್ಕೆ ಮೊದಲೆ ಅಂದರೆ 40 ಸಾವಿರ ಇದ್ದಾಗಲೇ ಹೆಚ್ಚಿನ ಒತ್ತಡ ಇತ್ತು. ಇನ್ನು 60 ಸಾವಿರ ಏರಿಸಿದ ಮೇಲೆ ಒತ್ತಡ ಬಂದೇಬರುತ್ತದೆ. ಎಲ್ಲೆಲ್ಲಿ ಸಾಧ್ಯವೊ ಅಲ್ಲಿ ಹೆಚ್ಚಿನ ಕೆ.ವಿ. ಲೈನ್ ಮಂಜೂರು ಮಾಡಿ, ಅವನ್ನು ಜಾರಿಗೆ ಕೊಡುವುಮ ಮತು ಕನ್‌ಸ್ಟ್ರಕ್ಷನ್ ಕೆಲಸದ ಕಡೆಗೂ ಗಮನ ಕೊಡುತ್ತಿದ್ದೇವೆ. In fact KEB, which is mainly meant for maintenance and distribution of power ಈ ಜವಾಬ್ದಾರಿಯನ್ನು ಹೊತ್ತಿದೆ. ಅನೇಕ ಕಡೆಗಳಲ್ಲಿ 66 ಕೆ.ವಿ.ಲೈನ್

ಇರಬಹುದು, ಮತ್ತೊಂದು ಇರಬಹುದು. ಈ ಕೆ.ವಿ. ಲೈನ್ ಮಾಡದೇ ಹೋದರೆ, ವೋಲ್ಟೇಜ್ ಡ್ರಾಪ್ ಆಗುವುದು ಮತ್ತೊಂದು ಆಗುವುದು, ಇದರಿಂದ ರೈತರಿಗೆ ತೊಂದರೆ ತಪ್ಪುವುದೇ ಇಲ್ಲ. ಅದಕ್ಕಾಗಿ ಅನೇಕ ಕಡೆಗಳಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ. ದಾವಣಗೆರೆ ಹತ್ತಿರ ತೆಗೆದುಕೊಂಡಿದ್ದೇವೆ, ಹರಪನಹಳ್ಳಿ ಸೈಡ್ ತೆಗೆದುಕೊಂಡಿದ್ದೇವೆ ಮತ್ತು ಬೇರೆ ಬೇರೆ ಕಡೆಗಳಲ್ಲಿಯೂ ತೆಗೆದುಕೊಳ್ಳುತ್ತೇವೆ. ಹೊಸ ಹೊಸ ಲೈನುಗಳನ್ನು ತೆಗೆದುಕೊಂಡು ಹಾಕುತ್ತಿದ್ದೇವೆ; ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಏಕೆಂದರೆ 60 ಸಾವಿರ ಆದಮೇಲೆ ಇದನ್ನು ಮಾಡುವುದು ಅನಿವಾರ್ಯವಾಗಿದೆ. ಈ ಖರ್ಚನ್ನು ಕೆ.ಇ.ಬಿ.ನವರು ನಿಭಾಯಿಸಲೇಬೇಕು. ಏಪ್ರಿಲ್ ತಿಂಗಳಿಂದ ಬರಗಾಲ ಇರುವುದರಿಂದ ಹೊಸ ಪಂಪುಸೆಟ್ಟುಗಳಿಗೆ ಎನರ್ಜೈಜ್ ಮಾಡಬೇಕು. ಅಂಡರ್‌ಗ್ರೌಂಡ್ ವಾಟರ್ ಟೇಬಲ್ ಗತಿ ಏನಾಗುತ್ತದೆಯೋ ನನಗೆ ಗೊತ್ತಿಲ್ಲ. ಆದರೂ ಕೂಡ ನಿಲ್ಲಿಸುವುದಕ್ಕಾಗುವುದಿಲ್ಲ, ಜನ ಕೇಳುತ್ತಾರೆ. ಕೆಲವು ಕಡೆಗಳಲ್ಲಿ ಅಂದರೆ ನೀರು ಸಿಕ್ಕುವ ಕಡೆಗಳಲ್ಲಾದರೂ ಸದುಪಯೋಗವಾಗಲಿ. ಈ ವಿಚಾರದಲ್ಲಿ ತಾವು ಪೇಳತಕ್ಕಂಥ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಿಕೊಂಡು ಹೋಗುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ: ಅಧ್ಯಕ್ಷರೇ ಗ್ರಾಮಾಂತರ ಪ್ರದೇಶಗಳಲ್ಲಿ ಈಗ ಎಷ್ಟು ಗಂಟೆ ಲೋಡ್ ಷೆಡ್ಡಿಂಗ್ ಆಗುತ್ತಿದೆ. ಅಷ್ಟು ಗಂಟೆ ಲೋಡ್ ರೆಡ್ಡಿಂಗ್ ಆಗಲಿ. ಅದರ ಬೇರೆ ವೇಳೆಯಲ್ಲಿ ಪದೇ ಪದೇ ಹೋಗುವುದನ್ನು ತಪ್ಪಿಸುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ: ನಾನು ಒಪ್ಪುತ್ತೇನೆ. ಲೋಡ್‌ರೆಡ್ಡಿಂಗ್ ಟೈಮ್ ಅಲ್ಲದೆ ಬೇರೆ ಟೈಮಿನಲ್ಲೂ ಹೋಗುತ್ತದೆ ಎಂದು ಹೇಳುತ್ತಿದ್ದಾರೆ. ಇದೂ ಕೂಡ ಗಮನಕ್ಕೆ ಬಂದಿದೆ, ಇದನ್ನು ಸರಿಪಡಿಸುತ್ತೇವೆ.

ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯಲ್ಲಿ ವಿದ್ಯುತ್ ಕೊರತೆ

254 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಸೀಕೆರೆ ತಾಲ್ಲೂಕಿನ ಗಂಡಸಿ ಹೋಬಳಿಯಲ್ಲಿ ವಿದ್ಯುತ್ ಕೊರತೆ ಹೆಚ್ಚಾಗಿ ಕೃಷಿ ಬಾವಿಗಳ ಪಂಪುಸೆಟ್ಟುಗಳು ಹಗಲಿನಲ್ಲಿ ಚಾಲನೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು;

ಇ) ಎಂ.ಯು.ಎಸ್.ಎಸ್.ನ್ನು ಗಂಡಸಿಯಲ್ಲಿ ತೆರೆಯುವುದಾಗಿ ಶಾಸನಸಭೆಯಲಲ್ಲಿ ಸರ್ಕಾರದವರು ಕೊಟ್ಟ ಆಶ್ವಾಸನೆಯ ಪ್ರಗತಿಯೇನು? ಮತ್ತು ಇದು ಯಾವ ಹಂತದಲ್ಲಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ರಾಜ್ಯದಲ್ಲಿ ವಿದ್ಯುತ್ತಿನ ಬೇಡಿಕೆ ತೀವ್ರವಾಗಿ ಏರುತ್ತಿರುವುದರಿಂದ ವಿದ್ಯುತ್ ಬಳಕೆಯನ್ನು ಲಭ್ಯತೆಗೆ ಸರಿಯಾಗಿಸಲು ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶದಲ್ಲಿ ದಿನವಹಿ ಆರು ಗಂಟೆಗಳ ಕಾಲ ಮಾತ್ರ ನಿಯಮಿತ ಲೋಡ್‌ರೆಡ್ಡಿಂಗ್ ಮಾಡಲಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ ಇದೇ ಪ್ರಕಾರ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಯಲ್ಲೂ ಸಹ ಈ ನಿಯಮಿತ ಲೋಡ್ ಷೆಡ್ಡಿಂಗ್‌ನ್ನು ಮಾಡಲಾಗುತ್ತಿದೆ.

ಆ) ಹಾಲಿ ನಿರ್ವಹಿಸುತ್ತಿರುವ ನಿಯಮಿತ ಲೋಡ್ ಷೆಡ್ಡಿಂಗ್ ಅನಿವಾರ್ಯವಾಗಿದೆ.